ಮಾಡುವುದನ್ನು ಗಮನಿಸಿದ ಶಂಕರಿ ಅಮ್ಮ ಒಂದು ದಿನ ಗಂಡನಲ್ಲಿ, 'ಪಾಪ, ಸೌಮ್ಯ ತುಂಬ ಬಡವಾಗಿದ್ದಾಳೆ. ಎಷ್ಟು ದಿನ ನಾವು ಅವಳನ್ನು ನಮ್ಮ ಮನೆಯಲ್ಲಿ ಕೆಲಸ ಮಾಡಿಸುವುದು?' ಎಂದು ಪ್ರಶ್ನಿಸಿದರು. ಗೋವಿಂದಭಟ್ಟರಿಗೆ ಮೊದಲು ಆ ಮಾತಿನ ಅರ್ಥ ಆಗಲಿಲ್ಲ. ಅವರು ಇದು ಶಂಕರಿಯ ಪ್ರತಿರೋಧವೇ ಇರಬಹುದೆಂದು ಪರಿಭಾವಿಸಿದರು. ತಣ್ಣಗಿನ ಸ್ವರದಲ್ಲಿ 'ಬೇಡವಾದರೆ ಬೇಡ. ಅವಳು ಅವಳ ಪಾಡಿಗೆ ಇರಲಿ ಬಿಡು' ಎಂದರು.

ಶಂಕರಿ ಅಮ್ಮನಿಗೆ ತಾನು ಆಡಿದ ಮಾತನ್ನು ಗಂಡ ಅಪಾರ್ಥ ಮಾಡಿಕೊಂಡಿದ್ದಾರೆ ಅನಿಸಿತು. ಆಕೆ ಗಂಡನಿಗೆ 'ಬಸುರಿ ಹೆಂಗಸರಲ್ಲಿ ವಾಂತಿ ಇರುವಾಗ, ಕೆಲಸ ಮಾಡುವುದು ತುಂಬಾ ಕಷ್ಟ' ಎಂಬ ಅರ್ಥದಲ್ಲಿ ನಾನು ಹೇಳಿದ್ದು' ಎಂದರು. ಭಟ್ಟರು, ಓ, ಹಾಗೋ?' ಎನ್ನುತ್ತಾ 'ನೀನೂ ಅವಳೂ ಏನು ನಿರ್ಧರಿಸುತ್ತೀರೋ ಅದು ನನಗೂ ಇಷ್ಟ' ಎಂದರು.

ಮರುದಿನ ಶಂಕರಿ ಅಮ್ಮ 'ನಾನು ನಮ್ಮ ಯಜಮಾನರಲ್ಲಿ ನಿನ್ನ ವಿಷಯ ಮಾತನಾಡಿದ್ದೇನೆ ಸೌಮ್ಯ. ನೀನು ಇನ್ನು ಮುಂದೆ ನಮ್ಮ ಮನೆಯ ಕೆಲಸದವಳಲ್ಲ. ನೀನು ನಮ್ಮ ಮನೆಯವಳೇ ಎಂದುಕೊಂಡಿದ್ದೇವೆ ನಾವು! ಹಾಗಾಗಿ ನೀನು ಮನೆಯ ಕೆಲಸಕ್ಕಾಗಿ ಮನೆಗೆ ಬರುವುದು ಬೇಡ, ಆದರೆ ಇಲ್ಲಿಗೆ ದಿನಾ ಬಂದು ಹೋಗುತ್ತಾ ಇರಬೇಕು' ಎಂದರು.

ಸೌಮ್ಯ ಅದನ್ನು ತಪ್ಪಾಗಿ ಅರ್ಥೈಸಿ ಆತಂಕಗೊಂಡಳು. ಆಕೆ ಅಳುತ್ತಾ 'ಅಕ್ಕ ನನ್ನ ಹೊಟ್ಟೆಗೆ ದಯವಿಟ್ಟು ಹೊಡಿಯಬೇಡಿ. ನಾನು ಮತ್ತೆ ಪುರ್ಬುವಿನ ಮನೆಗೆ ಕೂಲಿ ಕೆಲಸಕ್ಕೆ ಹೋಗಬೇಕೆನ್ನುವುದಾ ನೀವು?' ಎಂದು ಪ್ರಶ್ನಿಸಿದಳು.

ಶಂಕರಿ ಅಮ್ಮ 'ಅಯ್ಯೋ ರಾಮ! ನಾನು ಹಾಗೆ ಎಲ್ಲಿ ಹೇಳಿದೆ? ಇನ್ನು ಮುಂದೆ ನಿನ್ನ ಮತ್ತು ನಿನ್ನ ಹೊಟ್ಟೆಯಲ್ಲಿರುವ ಮಗುವಿನ ಜವಾಬ್ದಾರಿ ನಮ್ಮದು ಎಂದು ನಾನು ಹೇಳಿದ್ದೇ ಹೊರತು ನಿನ್ನನ್ನು ಕೆಲಸದಿಂದ ಬಿಡಿಸಿ ಬೀದಿಪಾಲು ಮಾಡುತ್ತೇನೆ ಎಂದುಕೊಂಡಿದ್ದೀಯಾ ಸೌಮ್ಯ?' ಎಂದು ಸೌಮ್ಯನನ್ನು ಸಂತೈಸಿದರು. ಆಮೇಲೆ 'ನಿನಗೆ ನಮ್ಮಲ್ಲಿಗೆ ಯಾವಾಗ ಬರಬೇಕು ಅನಿಸುತ್ತೋ ಆಗ ಹೊರಟು ಬಾ, ಅಥವಾ ನೀನು ನಿನ್ನ ಮನೆಯಲ್ಲೇ ಇರುತ್ತೇನೆ ಅಂದರೂ ನಮ್ಮ ಆಕ್ಷೇಪವಿಲ್ಲ. ಆದರೆ ನಿನ್ನ ಹೊಟ್ಟೆ ಬಟ್ಟೆಯ ಜವಾಬ್ದಾರಿ ನಮ್ಮದೇ' ಎಂದರು.

ಆ ದಿನ ರಾತ್ರೆ ಸೌಮ್ಯ ತನ್ನ ತಾಯಿಗೆ ತುಸು ದೊಡ್ಡ ಸ್ವರದಲ್ಲಿ ತಾನು ಬಸುರಿಯಾದ ವಿಷಯ ತಿಳಿಸಿ, ಶಂಕರಿ ಅಮ್ಮನ ಸಾಂತ್ವನ ಮತ್ತು ಗೋವಿಂದ ಭಟ್ಟರ ಔದಾರ್ಯವನ್ನು ಸಾದರಪಡಿಸಿದರು.

ಶಾರದಮ್ಮ 'ಹೌದಾ?' ಎಂದು ಸುಮ್ಮನಾದರು. ಕೆಲವು ಹೊತ್ತಿನ ಮೇಲೆ ಆಕೆ ತನ್ನ ಅಜ್ಜಿಯನ್ನು ಬೀಡಿನ ಮನೆ ಜೀವಂಧರ ಹೆಗ್ಡೆ ಇರಿಸಿಕೊಂಡಿದ್ದದ್ದನ್ನು ಸೌಮ್ಯಳಿಗೆ ತಿಳಿಸುತ್ತಾ 'ತನ್ನಮ್ಮ ಹುಟ್ಟಿದ್ದು ಜೈನನಿಗೇ' ಎಂದರು. ಆಮೇಲೆ 'ಇದು ಇಡೀ ಊರಿಗೂ ಗೊತ್ತಿತ್ತು' ಎಂದವಳೇ, 'ಆ ಜೀವಂಧರ ಹೆಗ್ಡೆಯವರ ಹೆಂಡತಿ ಮಹಾ 'ಸೂಟೆಯಂತೆ'. ಯಾವಾಗ ನೋಡಿದರೂ ಅಜ್ಜಿಯನ್ನು ಓರೆಗಣ್ಣಿನಿಂದ ನೋಡುತ್ತಿದ್ದರಂತೆ, ಮನೆಯ ಕೆಲಸದಾಳುಗಳಲ್ಲಿ 'ಯಾವ ಸುಂದರಿ ಅಂತ ಇವರು ಅವಳನ್ನು ಇಡಿಸಿಕೊಂಡದ್ದು?' ಎಂದು ಹೇಳಿ ಹಂಗಿಸುತ್ತಿದ್ದಳಂತೆ ಎಂದು ಹೇಳಿ, 'ಒಂದು ದಿನ ಏನಾಯ್ತು ಗೊತ್ತಾ? ಹೆಗ್ಡೆ ಅವರಲ್ಲಿ ಅಜ್ಜಿ ಈ ವಿಷಯವನ್ನೆಲ್ಲ ಹೇಳಿ 'ಇಂಥ ಮಾತುಗಳನ್ನು ಕೇಳಿ ನಾನು ಯಾಕೆ ನಿಮ್ಮನ್ನು ಹಾಸಿಗೆಗೆ ಕರೆಯಬೇಕು?' ಎಂದು ಪ್ರಶ್ನಿಸಿದ್ದಳಂತೆ. ಮರುದಿನ ಬೆಳಗ್ಗೆ ನಮ್ಮನೆಯಿಂದ ಎದ್ದು ಬೀಡಿಗೆ ಹೋದ ಹೆಗ್ಡೆಯವರು ಹೆಂಡತಿಯ ಬೆನ್ನಿಗೆ ಗುದ್ದಿ 'ನಿನಗೇನು ಕಡಿಮೆ ಮಾಡಿದ್ದೇನೆ' ಎಂದು ಹೆಂಡತಿಯನ್ನು ಪ್ರಶ್ನಿಸಿದ್ದೂ ಅಲ್ಲದೆ, 'ಆ ಚಿನ್ನದ ಮಿಸ್ರಿ ಮಾಲೆ ತೆಗೆದುಕೊಡು, ಅದನ್ನು ಅವಳಿಗೆ ಕೊಟ್ಟು ಬರುತ್ತೇನೆ' ಎಂದು ತನ್ನ ಹೆಂಡತಿಯ ಕುತ್ತಿಗೆಯಿಂದ ಚಿನ್ನದ ಸರವನ್ನು ಕಿತ್ತು ರಾತ್ರೆ ಅಜ್ಜಿಗೆ ನಜರು ಒಪ್ಪಿಸುವಂತೆ ಒಪ್ಪಿಸಿದ್ದರಂತೆ' ಎಂದರು.

ಸೌಮ್ಯ 'ಪಾಪ' ಎಂದು ಪ್ರತಿಕ್ರಿಯಿಸಿದ್ದು ಕೇಳಿಸಿಕೊಳ್ಳದ ಅಜ್ಜಿ ಮಾತು ಮುಂದುವರಿಸಿ, 'ಅಷ್ಟೇ ಅಲ್ಲ, ನನ್ನಮ್ಮ ಬಸುರಿಯಾದ ದಿನಗಳಲ್ಲಿ ದಿನಾ ತಮ್ಮ ಮನೆಯಿಂದ ಹೆಗ್ಡೆಯವರು ಎಳನೀರು ಕಳುಹಿಸುತ್ತಿದ್ದರು ಗೊತ್ತಾ?' ಎನ್ನುತ್ತಾ 'ನಿನ್ನ ಅಜ್ಜಿಯ ಊಟೋಪಚಾರದ ಖರ್ಚೆಲ್ಲ ಹೆಗ್ಡೆಯವರದ್ದೇ ಆಗಿತ್ತು' ಎಂದರು. ಸೌಮ್ಯಳ ಮಾತು ಬಿದ್ದುಹೋಯಿತು. ಆಕೆ ತಾನು ಎಂಥ ಕುಟುಂಬದ ಹಿನ್ನೆಲೆಯಿಂದ ಬಂದೆ ಎಂದು ನೊಂದುಕೊಳ್ಳುತ್ತಿರುವಾಗ ಶಾರದಮ್ಮ 'ಇದನ್ನೆಲ್ಲ ನೋಡಿಯೇ ನನ್ನಮ್ಮ ನನಗೆ ಮದುವೆ ಮಾಡಿದ್ದು. ನಾನು ಮದುವೆಯಾಗಿರದಿದ್ದರೆ ಯಾರದೋ ಮನೆಯ ಒಬ್ಬನಿಗೆ ಇಡಿಸಿಕೊಂಡವಳಾಗುತ್ತಿದ್ದೆ' ಎಂದರು.

ಅಜ್ಜಿಯ ಮಾತಿನಿಂದ ಸೌಮ್ಯಳಿಗೆ ಆತಂಕ ನಿವಾರಣೆಯಾದರೂ ಕಳೆದ ನಾಲ್ಕು ವರುಷಗಳ ಕಾಲ ತನ್ನ ಗಂಡ ಎನಿಸಿಕೊಂಡ ಶಿವರಾಯ ಒಮ್ಮೆಯೂ ಈ ಮನೆಗೆ ಬಂದದ್ದೇ ಇಲ್ಲ ಎಂಬ ನೋವು ಆಕೆಯಲ್ಲಿತ್ತು. ಒಮ್ಮೆ ಊರಿನ ಜಾತ್ರೆಯ ಗದ್ದಲಗಳಲ್ಲಿ ದಢೂತಿ ಹೆಂಗಸೊಬ್ಬಳು ಸೌಮ್ಯಳನ್ನು ಕರೆದು, 'ನಿನ್ನ ಗಂಡ ಆ ಹಿರಿಯಡ್ಕದಲ್ಲಿ ಒಬ್ಬಳು ದೇವದಾಸಿಯನ್ನು ಕಟ್ಟಿಕೊಂಡು ಇದ್ದಾನಂತೆ ಗೊತ್ತಾ ನಿನಗೆ?' ಎಂದು ಪ್ರಶ್ನಿಸಿದ್ದು ಆಕೆಯ ನೆನಪಿಗೆ ಬಂದಾಗ, ಹೇಗೆ ಉತ್ತರಿಸಬೇಕೆಂದು ತಿಳಿಯದ ಸೌಮ್ಯ ಮುಖ ಸಣ್ಣಗೆ ಮಾಡಿಕೊಂಡು 'ಗಂಡಸರು ಏನು ಮಾಡುತ್ತಾರೆ ಎಂದು ನಮಗೆ ಹೇಗೆ ಗೊತ್ತಾಗಬೇಕಮ್ಮ? ಗೊತ್ತಾದರೂ ನಾವೇನು ಮಾಡಲಿಕ್ಕಾಗುತ್ತದೆ ಹೇಳಿ?' ಎಂದಿದ್ದಳು. ಆಗ ಆ ಹೆಂಗಸು 'ನನ್ನ ಗಂಡನೂ ಖುಷಿ ಬಂದಾಗ ಮನೆಗೆ ಬರುವುದು ಮಾರಾಯ್ತಿ. ಹಾಗೇ ಖುಷಿ ಬಂದಾಗ ಮನೆಯಿಂದ ಎದ್ದು ಹೋಗುವುದು' ಎಂದು ಹೇಳುತ್ತಾ, 'ಹಡಬೆಗಳು ಇವು' ಎಂದು ತನ್ನ ಗಂಡನನ್ನು ಛೇಡಿಸಿದ್ದಳು. ಅದನ್ನು ಕೇಳಿಸಿಕೊಂಡ ಸೌಮ್ಯಳಿಗೆ 'ಹೆಣ್ಣು ಜನ್ಮವೇ ಸಾಕು ರಾಮ ರಾಮಾ' ಎಂಬ ಬಯಲಾಟದ ಪಂಚವಟಿ ಪ್ರಸಂಗದಲ್ಲಿ ಸೀತೆ ಅಲವತ್ತುಕೊಳ್ಳುವುದು ನೆನಪಾಗಿತ್ತು. ಆಗ ಸೌಮ್ಯ ತನ್ನಲ್ಲಿ 'ಸೀತೆಗಾದರೂ ರಾಮ ಬಂದಾನು ಎಂಬ ನಿರೀಕ್ಷೆ ಇತ್ತು. ತನಗೆ ಅದೂ ಇಲ್ಲ' ಎಂದುಕೊಂಡು ಈ ಗಂಡನೆಂಬ ಪ್ರಾಣಿ ಈಗ ಆಕಸ್ಮಿಕವಾಗಿ ಮನೆಗೆ ವಕ್ಕರಿಸಿದರೆ ತಾನು ಏನು ಹೇಳುವುದು ಎಂದು ಆತಂಕಗೊಂಡಿದ್ದಳು.

ಸೌಮ್ಯಳ ಹೊಟ್ಟೆಗೆ ನಾಲ್ಕು ತಿಂಗಳು ತುಂಬಿತು ಎನ್ನುವಷ್ಟರಲ್ಲಿ ಒಂದು ಮಧ್ಯಾಹ್ನ ಸೌಮ್ಯಳ ಗಂಡ ಅನಿಸಿಕೊಂಡ ಶಿವರಾಯ ಪ್ರತ್ಯಕ್ಷನಾದ. ಆತ 'ನನಗೆ ಎಲ್ಲವೂ ಗೊತ್ತಾಗಿದೆ ಸೌಮ್ಯ! ಆದರೆ ನೀನು ಇಂಥ ವಂಚಕಿ ಎಂದು ಗೊತ್ತೇ ಇರಲಿಲ್ಲ' ಎಂದು ಸೌಮ್ಯಳನ್ನು ತರಾಟೆಗೆ ತೆಗೆದುಕೊಂಡ. ಸೌಮ್ಯ ಮೊದಲಿಗೆ ಏನೂ ಆಡದೇ ಇದ್ದರೂ ಆಮೇಲೆ 'ನಿಮ್ಮಂಥ ಮನುಷ್ಯತ್ವವೇ ಇಲ್ಲದ ಗಂಡಸರನ್ನು ಕಟ್ಟಿಕೊಂಡು ನಾನೇನು ಮಾಡಲಿ ಹೇಳಿ? ಉಪ್ಪು ಹುಳಿ ಖಾರ ತಿನ್ನುವ ನಾನು ಬೇಕೆಂದು ಕಾಲು ಜಾರಿದವಳಲ್ಲ. ಪ್ರೀತಿಸಿಯೇ ನಾನು ಗೋವಿಂದ ಭಟ್ಟರನ್ನು ಕೂಡಿದ್ದು' ಎಂದಳು. ಆ ಮಾತನ್ನು ನಿರೀಕ್ಷಿಸದೆ ಇದ್ದ ಶಿವರಾಯ ಸ್ವಲ್ಪ ಎಚ್ಚರದಿಂದ ಎಂಬಂತೆ, 'ಹೋಗಲಿ ಬಿಡು, ಹಾಗಾದರೆ ಆ ಗರ್ಭ ತೆಗೆಸಿಬಿಡೋಣ' ಎಂದ. ಆಗ ಸೌಮ್ಯಳಿಗೆ ತಡೆಯಲಾರದ ಸಿಟ್ಟು ಬಂತು. ಆಕೆ 'ಈ ಗರ್ಭ ತೆಗೆಸಿಬಿಡು ಎನ್ನಲು ನೀವು ಯಾರು? ನನ್ನ ಗಂಡ ಎನ್ನುವವನು ಇದ್ದ ಎಂಬುದನ್ನು ನಾನು ಆಗಲೇ ಮರೆತಿದ್ದೇನೆ. ನೀವು ಏನು ಬೇಕಾದರೂ ಹೇಳಿ, ನಾನು ಖಂಡಿತ ಗರ್ಭಪಾತ ಮಾಡಿಸುವವಳಲ್ಲ' ಎಂದಳು.

ಶಿವರಾಯ ಸ್ವಲ್ಪ ಪೆಚ್ಚಾದ. ಆಮೇಲೆ ಸಾವರಿಸಿಕೊಂಡು ತಾನು ಗಂಡ ಎನ್ನುವ ಅಧಿಕಾರದಿಂದ 'ನನ್ನ ಹೆಂಡತಿ ಎನ್ನುವ ಗೌರವ ನಿನಗೆ ಬೇಕೆಂದಾದರೆ ನೀನು ನಾನು ಹೇಳಿದ ಹಾಗೆ ಗರ್ಭಪಾತ ಮಾಡಿಸಬೇಕು. ಯಾರೋ ಬಸಿರು ಮಾಡಿದ್ದನ್ನು ಹೊತ್ತು ನೀನು ಹೆತ್ತರೆ ನಿನಗೆ ಇರಿಸಿಕೊಂಡವಳು ಎಂಬ ಕೆಟ್ಟ ಹೆಸರು ಬರುವುದಿಲ್ಲವೇ?' ಎಂದು ಆರ್ಭಟಿಸಿದ.

ಸೌಮ್ಯಳಿಗೆ ಆ ಮಾತನ್ನು ಕೇಳಿಸಿಕೊಳ್ಳಲಾಗಲಿಲ್ಲ. 'ಮರ್ಯಾದೆ ಇದ್ದವರಿಗೆ ತಾನೇ ಮರ್ಯಾದೆಯ ಪ್ರಶ್ನೆ ಎತ್ತುವ ಹಕ್ಕು. ನಿಮಗಂತೂ ಮರ್ಯಾದೆಯೇ ಇಲ್ಲ. ಇನ್ನು ನನಗೆ ಏನು ಹೇಳುವುದು ನೀವು?' ಎಂದಳು. ಆ ಮಾತನ್ನು ನಿರೀಕ್ಷಿಸಿರದ ಶಿವರಾಯ ತನ್ನ ಅತ್ತೆ ಶಾರದಮ್ಮನ ಮುಂದೆ ಎಲ್ಲವನ್ನೂ ಹೇಳಿ, 'ನಾನು ಇಲ್ಲೇ ಇರಲಿಕ್ಕೆಂದು ಬಂದವನು ಅತ್ತೆ. ಇನ್ನು ಮುಂದೆ ನಿಮ್ಮ ಮಗಳ ಜೊತೆಗೇ ಇರುತ್ತೇನೆ. ಅವಳ ಗರ್ಭ ತೆಗೆಸಲು ನೀವಾದರೂ ಹೇಳಬಾರದೇ?' ಎಂದ.

ಶಾರದಮ್ಮ ಅಳಿಯನ ಮಾತಿಗೆ ಕರಗಿಹೋದರು. ಆಕೆ ಸೌಮ್ಯಳಿಗೆ ಗಂಡನೊಂದಿಗೆ ಮತ್ತೆ ಹೊಂದಿಕೊಂಡು ಸಂಸಾರ ನಡೆಸುವುದು ಕ್ಷೇಮ ಎಂದು ಭಾವಿಸಿ ತಗ್ಗಿದ ಸ್ವರದಲ್ಲಿ, 'ನಿನ್ನ ಗಂಡ ಹೇಳುವುದರಲ್ಲಿ ಅರ್ಥ ಇದೆ ಸೌಮ್ಯ. ಯೋಚನೆ ಮಾಡು' ಎಂದರು.

(ಸಶೇಷ)